SC No. 9/2024
PW.-02

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್.ಸಿ. 9/2024

| | | |
|---|---|---|
| ಸಾಕ್ಷಿದಾರರ ಹೆಸರು | ಚೈತ್ರ | ಪ್ರಮಾಣ ವಚನ ಮಾಡಿದ ದಿನಾಂಕ: **01.09.2025** |
| ತಂದೆಯ/ಗಂಡನ ಹೆಸರು | ಮಹೇಂದ್ರ | |
| ವಯಸ್ಸು | 33 ವರ್ಷ | |
| ವೃತ್ತಿ | ಎಫ್.ಡಿ.ಎ ಕೆಲಸ | ಪ್ರಾ.ಸಾಃ 02 |
| ವಾಸ ಸ್ಥಳ | ಪಡುವಾರಹಳ್ಳಿ, ಮೈಸೂರು | ಚಾ.ಸಾಃ 05 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಚಾಸಾ-1 ನನಗೆ ಗಂಡನಾಗಬೇಕು. ಪ್ರಾಸಾ-1 ನನ್ನ ಅಕ್ಕನ ಮಗ ಇರುತ್ತಾರೆ. ಚಾಸಾ-2 ನನಗೆ ಗೊತ್ತು. ನಾನು ಈ ಪ್ರಕರಣದ ಇಬ್ಬರು ಆರೋಪಿತರನ್ನು ಈ ಹಿಂದೆ ನೋಡಿರುವುದಿಲ್ಲ.

ನನ್ನ ಗಂಡ ಚಾಸಾ-1 ರವರು ಪ್ಯಾಸೆಂಜರ್ ಆಟೋ ನಡೆಸಿಕೊಂಡು ಇರುತ್ತಾರೆ. ದಿನಾಂಕ 26.07.2022 ರಂದು ನಾನು ಮನೆಯಲ್ಲಿ ಇದ್ದಾಗ ರಾತ್ರಿ 10.30 ಸುಮಾರಿಗೆ ಫೋನ್ ಮಾಡಿ ಊಟಕ್ಕೆ ಬರುವಂತೆ ಹೇಳಿದೆ ಆದಾದ ಸುಮಾರು 10 ನಿಮಿಷಕ್ಕೆ ನನ್ನ ಗಂಡ ನನಗೆ ಫೋನ್ ಮಾಡಿ ತಿಲಕ್ ನಗರದ ಶನಿಮಾಹತ್ಮ ಆರ್ಚ್ ನ ಬಳಿ ಮಚ್ಚಿನಲ್ಲಿ ತಲೆಗೆ ಮತ್ತು ಬಲಗಾಲಿಗೆ ಹೊಡೆದಿರುತ್ತಾರೆ ಬೇಗ ಬಂದು ನನ್ನನ್ನು ಉಳಿಸಿಕೊಳ್ಳಿ ಎಂದು ಫೋನ್ ಮಾಡಿದ್ದರು. ಆ ವೇಳೆಯಲ್ಲಿ ಪ್ರಾಸಾ-1 ರವರು ಮನೆಯಲ್ಲಿಯೇ ಇದ್ದರು. ಆಗ ನಾನು ಪ್ರಾಸಾ-1 ರವರಿಗೆ ಫೋನ್ ಮಾಡಿದ ವಿಷಯ ತಿಳಿಸಿದೆ ಮತ್ತು ಕೂಡಲೇ ಸ್ಥಳಕ್ಕೆ

ಹೋಗುವಂತೆ ತಿಳಿಸಿದೆ. ಆದ್ದರಿಂದ ಫ್ರಾಸಾ-1 ಮತ್ತು ಚಾಸಾ-3 ರವರು ಕೂಡಿ ದ್ವಿಚಕ್ರ ವಾಹನದಲ್ಲಿ ತಿಲಕ್ ನಗರದ ಶನಿಮಹಾತ್ಮ ಆರ್ಚ್ ನ ಬಳಿ ಹೋಗಿದ್ದರು. ಆನಂತರ ನನಗೆ ಫೋನ್ ಮಾಡಿ ನನ್ನ ಗಂಡನನ್ನು ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಿರುತ್ತದೆ ಎನ್ನುವ ವಿಷಯವನ್ನು ತಿಳಿಸಿದ್ದರು. ನಾನು ಕೂಡಲೇ ಕೆ.ಆರ್. ಆಸ್ಪತ್ರೆಗೆ ಹೋಗಿದ್ದೆ. ಕೆ.ಆರ್. ಆಸ್ಪತ್ರೆಯ ವೈದ್ಯರು ನನ್ನ ಗಂಡನಿಗೆ ತುಂಬಾ ಪೆಟ್ಟಾಗಿರುತ್ತದೆ ಅವರು ಕೋಮಾಗೆ ಹೋಗುವ ಸಾಧ್ಯತೆ ಇರುತ್ತದೆ ಕೂಡಲೇ ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದ್ದರಿಂದ ನಾವುಗಳು ಕೂಡಲೇ ನನ್ನ ಗಂಡನನ್ನು ಡಿ.ಆರ್.ಎಂ. ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ನನ್ನ ಗಂಡನ ತಲೆಯ ಹಿಂಭದಿಗೆ ಲಾಂಗ್ ನಿಂದ ಹೊಡೆದಿದ್ದರು ಮತ್ತು ನನ್ನ ಗಂಡನ ಬಲ ತೊಡೆಯ ಭಾಗಕ್ಕೆ ಲಾಂಗ್ ನಿಂದ ಹೊಡೆದಿದ್ದರು. ಡಿ.ಆರ್.ಎಂ. ಆಸ್ಪತ್ರೆಯ್ಲುಲ್ಲಿ ಪೊಲೀಸರು ಬಂದು ನನ್ನ ಗಂಡನ ಹೇಳಿಕೆಯನ್ನು ಪಡೆದುಕೊಂಡಿದ್ದರು.

ನನ್ನ ಗಂಡನ ಸ್ನೇಹಿತ ವಿಜಯ್ ಚಾಸಾ-2 ರವರು ತನ್ನ ಮೊಬೈಲ್ ಅನ್ನು 1 ನೇ ಆರೋಪಿತನ ಕಡೆ 2,000/- ರೂಗಳಿಗೆ ಅಡವು ಇಟ್ಟಿದ್ದರಂತೆ. ಚಾಸಾ-2 ರವರು ಆ ಮೊಬೈಲ್ ಅನ್ನು ಬಿಡಿಸಿ ಕೊಂಡು ಬರೋಣ ಎಂದು ಹೇಳಿ ನನ್ನ ಗಂಡನನ್ನು ಸಹ ಕರೆದುಕೊಂಡು ತಿಲಕ್ ನಗರದ ಶನಿಮಹಾತ್ಮ ಆರ್ಚ್ ಬಳಿ ಕರೆದುಕೊಂಡು ಹೋಗಿದ್ದರಂತೆ. ಅಲ್ಲಿ ಮೊಬೈಲ್ ವಿಚಾರಕ್ಕೆ 1 ನೇ ಆರೋಪಿತನಿಗೂ ಮತ್ತು ಚಾಸಾ-2 ರವರಿಗೆ ಮಾತಿಗೆ ಮಾತು ಆಗಿತ್ತಂತೆ. ಆ ಮಾತುಕತೆ ಬಡ್ಡಿ ವಿಚಾರವಾಗಿ ಆಗಿತ್ತಂತೆ. ಆಗ 1 ನೇ ಆರೋಪಿ ಚಾಸಾ-2 ರವರಿಗೆ ಲಾಂಗ್ ಮಚ್ಚಿನಿಂದ ಹೊಡೆಯಲು ಹೋಗಿದ್ದರಂತೆ ಆಗ ಚಾಸಾ-2 ರವರು ತಪ್ಪಿಸಿಕೊಂಡಿದ್ದರಂತೆ ಆಗ ನನ್ನ ಗಂಡ ಆರೋಪಿತರಿಗೆ ಏಕೆ ಲಾಂಗ್ ಮಚ್ಚಿನಿಂದ ಚಾಸಾ-2 ರವರನ್ನು ಹೊಡೆಯಲು ಪ್ರಯತ್ನ ಪಡುತ್ತೀರಿ ಎಂದು ಕೇಳಿದ್ದರಂತೆ ಅದಕ್ಕೆ ಆರೋಪಿತರು ನನ್ನ ಗಂಡನಿಗೆ ಲಾಂಗ್ ಮಚ್ಚಿನಿಂದ ತಲೆಯ ಹಿಂಭಾಗಕ್ಕೆ ಮತ್ತು

ಬಲ ತೊಡೆಗೆ ಹೊಡೆದಿದ್ದರಂತೆ. ಈ ವಿಷಯವೆಲ್ಲಾ ನನ್ನ ಗಂಡ ಪೊಲೀಸರಿಗೆ ಹೇಳಿಕೆ ಕೊಡುವಾಗ ಗೊತ್ತಾಗಿತ್ತು. ನಾನು ನನ್ನ ಗಂಡ ಹೇಳಿಕೆ ಕೊಡುವಾಗ ಗಂಡನ ಜೊತೆಯಲ್ಲಿಯೇ ಇದ್ದೆ. ಪೊಲೀರು ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿದ್ದರು. ನನ್ನ ಗಂಡ ಧರಿಸಿದ್ದ ಬಟ್ಟೆಗಳೆಲ್ಲಾ ರಕ್ತಮಯವಾಗಿತ್ತು. ಆ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ರಕ್ತಮಯವಾದ ಪ್ಯಾಂಟ್ ಮತ್ತು ಶರ್ಟ್ ಅನ್ನು ತೋರಿಸಲಾಯಿತು. ಸಾಕ್ಷಿದಾರರು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ–1 ಮತ್ತು 2 ಎಂದು ಗುರುತಿಸಲ್ಪಟ್ಟಿರುತ್ತವೆ.

**ಪಾಟೀ ಸವಾಲುಃ 1 ಆರೋಪಿ ಪರ ವಕೀಲರಿಂದ :**

**1 ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಖರ್ಚು ನೀಡುವ ಷರತ್ತಿನೊಂದಿಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.**

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.